# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** ದಿನಾಂಕ: 03.07.2019

## ಬಿಬಿಎಂಪಿಯ ವಾರ್ಡ್‌ಗಳನ್ನು ಜನಸಂಖ್ಯೆ ಆಧಾರದ ಮೇಲೆ ಮರು ವಿಂಗಡಿಸುವ ಬಗ್ಗೆ ಏರ್ಪಡಿಸಿದ್ದ ಸಭೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ವಾರ್ಡ್‌ಗಳನ್ನು ಜನಸಂಖ್ಯೆ ಆಧಾರದ ಮೇಲೆ ಪುನರ್ ವಿಂಗಡಿಸಲು ನೀಲನಕ್ಷೆ ಸಿದ್ಧಪಡಿಸಿ ಅದನ್ನು ಕ್ಷೇತ್ರವಾರು ಕಂದಾಯ ಅಧಿಕಾರಿಗಳಿಗೆ ವಿತರಿಸಲಾಗಿದೆ. ಅವರು ನೀಲನಕ್ಷೆಯನ್ನಾಧರಿಸಿ ಹೊಸ ವಾರ್ಡ್‌ಗಳ ರಚನೆಯಲ್ಲಿ ಕಂಡುಬರುವ ಲೋಪಗಳನ್ನು ಪಟ್ಟಿ ಮಾಡಿ ವಾರದೊಳಗಾಗಿ ವರದಿ ನೀಡುವಂತೆ ಆಯುಕ್ತರು ಅಧಿಕಾರಿಗಳಿಗೆ ಆದೇಶಿಸಿದರು.

ಬಿಬಿಎಂಪಿಯ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡುವ ಪ್ರಕ್ರಿಯೆ ಸಂಬಂಧ ಬುಧವಾರ ಮಲ್ಲೇಶ್ವರ ಐಪಿಪಿ ಕೇಂದ್ರದಲ್ಲಿ ಸಭೆ ಏರ್ಪಡಿಸಿ ಎಲ್ಲ ಕಂದಾಯ ಹಾಗೂ ಸಹಾಯ ಕಂದಯ ಅಧಿಕಾರಿಗಳಿಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಈ ವೇಳೆ ಮಾನ್ಯ ಆಯುಕ್ತರು, ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ ಮತ್ತು ಆಡಳಿತ), ವಿಶೇಷ ಆಯುಕ್ತರು(ಹಣಕಾಸು ಮತ್ತು ಕಂದಾಯ), ಎಲ್ಲ ವಲಯಗಳ ಜಂಟಿ ಆಯುಕ್ತರು, ಕಾಂದಾಯ ವಿಭಾಗದ ಜಂಟಿ ಆಯುಕ್ತರು ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಮಹಾನಗರ ಪಾಲಿಕೆ(ಬಿಎಂಪಿ) ಇದ್ದ ವೇಳೆ ನಗರದಲ್ಲಿ 100 ವಾರ್ಡ್‌ಗಳಿದ್ದವು. ಬಳಿಕ 2007ರಲ್ಲಿ 7 ನಗರಸಭೆಗಳು, 1 ಪಟ್ಟಣ ಪಂಚಾಯತ್ ಹಾಗೂ 110 ಹಳ್ಳಿಗಳನ್ನು ಸೇರಿಸಿಕೊಂಡು ಒಟ್ಟು 198 ವಾರ್ಡ್‌ಗಳಂತೆ ಪುನರ್ ರಚಿಸಿ ಬಿಬಿಎಂಪಿಯನ್ನಾಗಿ ಮಾಡಲಾಯಿತು. ಇದೀಗ 2011ರ ಜನಸಂಖ್ಯೆ(84,43,675)ಗೆ ಅನುನುಗುಣವಾಗಿ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಲಾಗುತ್ತಿದೆ. ಅದಕ್ಕಾಗಿ ಈಗಾಗಲೇ ನೀಲನಕ್ಷೆ ಸಿದ್ಧಪಡಿಸಿದ್ದು, ಯಾವ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ವಾರ್ಡ್‌ಗಳನ್ನು ರಚಿಸಬೇಕು, ವಾರ್ಡ್‌ಗಳ ವ್ಯಾಪ್ತಿ ಎಷ್ಟಿರಬೇಕು ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

ಬಳಿಕ ಆಯುಕ್ತರು ಸಭೆಯಲ್ಲಿ ಮಾತನಾಡಿ, ಎಲ್ಲ 28 ವಿಧಾನಸಭಾ ಕ್ಷೇತ್ರವಾರು ಬರುವ ವಾರ್ಡ್‌ಗಳನ್ನು ಮರು ವಿಂಗಡಿಸಲಾಗಿದ್ದು, ಅದರ ನೀಲನಕ್ಷೆಯನ್ನು ಕ್ಷೇತ್ರವಾರು ಕಂದಾಯ ಅಧಿಕಾರಿಗಳಿಗೆ ನೀಡಲಾಗುವುದು. ಅದನ್ನಾಧರಿಸಿ ಹೊಸದಾಗಿ ಮಾಡುತ್ತಿರುವ ವಾರ್ಡ್‌ಗಳ ಗಡಿ ರೇಖೆ ಬಳಿ ಕಂಡುಬರು ಲೋಪಗಳನ್ನು ಪಟ್ಟಿ ಮಾಡಿ ವಾರದೊಳಗಾಗಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಿತರಣೆ ಮಾಡುವ ನೀಲನಕ್ಷೆಯನ್ನಾಧರಿಸಿ ಎಲ್ಲ ಕಂದಾಯ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ತಮ್ಮ ವಾರ್ಡ್‌ಗಳಿಗೆ ಭೇಟಿಕೊಟ್ಟು ಹೊಸ ವಾರ್ಡ್‌ಗಳ ವಿಸ್ತೀರ್ಣದ ಮಾಹಿತಿ, ಹಳೆಯ ವಾರ್ಡ್‌ಗಳಲ್ಲಿರುವ ಮತಗಟ್ಟೆಗಳು ಹೊಸ ವಾರ್ಡ್ ಗಡಿ ರೇಖೆಯಲ್ಲಿ ಬೇರ್ಪಟ್ಟಿವೆಯೆ, ಬಡಾವಣೆ/ಕಾಲೋನಿಗಳು ಎರಡು ವಾರ್ಡ್‌ಗಳಿಗೆ ಹಂಚಿಕೆಯಾಗಿವೆಯೆ, ರಸ್ತೆಗಳ ಹೆಸರು ಬದಲಾಗಿದೆಯೆ ಎಂಬುದನ್ನು ಪಟ್ಟಿಮಾಡಿ ವರದಿ ಸಿದ್ಧಪಡಿಸಿ ಪಾಲಿಕೆಗೆ ಸಲ್ಲಿಸಬೇಕು. ಅದನ್ನು ಪರಿಶೀಲಿಸಿ ಇರುವ ಲೋಪಗಳನ್ನು ಸರಿಪಡಿಸಲಾವುದು. ನಂತರ ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರು ಹಾಗೂ ಕಾರ್ಪೊರೇಟರ್‌ಗಳಿಗೆ ಪ್ರಾತ್ಯಕ್ಷಿತೆ ನೀಡಿ ಅವರು ನೀಡುವ ಸಹಲೆಗಳನ್ನು ಪರಿಗಣಿಸಿ ಅಗತ್ಯ ಬದಲಾವಣೆಗಳನ್ನು ಮಾಡಲಾಗವುದು. ಕೊನೆಗೆ ಒಂದು ತಿಂಗಳುಗಳ ಕಾಲ ಸಾರ್ವಜನಿಕರ ಆಕ್ಷೇಪಣೆಗಳಿಗೆ ಅವಕಾಶ ನೀಡಲಾಗುವುದು. ತದನಂತರ ಅಗತ್ಯ ಮಾರ್ಪಾಡುಗಳನ್ನು ಮಾಡಿ ಅಂತಿಮ ಕರಡು ಸಿದ್ಧಪಡಿಸಿ ಹೊಸ ವಾರ್ಡ್‌ಗಳ ಮರುವಿಂಗಡನೆ ಮಾಡಲಾಗುವುದು ಎಂದು ತಿಳಿಸಿದರು.

ಬಿಬಿಎಂಪಿ 198 ವಾರ್ಡ್‌ಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಸರಾಸರಿ 42 ಸಾವಿರ ಅನುಪಾತದಲ್ಲಿ ವಾರ್ಡ್‌ಗಳ ಮರುವಿಂಗಡನೆ ಮಾಡಲಾಗುತ್ತಿದೆ. ಅದರಂತೆ ಆಯಾ ವಿಧಾನ ಸಭಾ ಕ್ಷೇತ್ರಗಳಲ್ಲಿರುವ ವಾರ್ಡ್‌ಗಳ ವಿಸ್ತೀರ್ಣ ಮಾತ್ರ ಬದಲಾಗುತ್ತಿದೆ. ಕೆಲ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ಗಳ ಸಂಖ್ಯೆ ಕಡಿಮೆಯಾಗಲಿದ್ದು, ಇನ್ನು ಕೆಲವು ವಾರ್ಡ್‌ಗಳಲ್ಲಿ ಹೆಚ್ಚಳವಾಗಲಿದ್ದು, 13 ವಾರ್ಡ್‌ಗಳಲ್ಲಿ ಯಾವುದೇ ಬದಲಾವಣೆ ಮಾಡುತ್ತಿಲ್ಲ ಎಂದು ಮಾಹಿತಿ ನೀಡಿದರು.

## ಬದಲಾಗದ ವಾರ್ಡ್‌ಗಳು: 13

| **ಕ್ಷೇತ್ರ** | **ವಾರ್ಡ್‌ಗಳು** |
|---|---|
| ಯಲಹಂಕ | ಯಲಹಂಕ ಸ್ಯಾಟಲೈಟ್ ಟೌನ್ |
| ವಿಜಯನಗರ | ವಿಜಯನಗರ, ಕೆಂಪಾಪುರ ಅಗ್ರಹಾರ, ಅತ್ತಿಗುಪ್ಪೆ |
| ಸಿ.ವಿ.ರಾಮನ್ | ನಗರ ಬೆನ್ನಿಗಾನಹಳ್ಳಿ, ಸರ್ವಜ್ಞನಗರ |
| ಬಿಟಿಎಂ ಬಡಾವಣೆ | ಈಜಿಪುರ |
| ಚಿಕ್ಕಪೇಟೆ | ಜಯನಗರ |
| ಶಾಂತಿನಗರ | ಶಾಂತಿನಗರ |
| ಗೋವಿಂದರಾಜನಗರ | ನಾಯಂಡಹಳ್ಳಿ |
| ಪುಲಕೇಶಿನಗರ | ದೇವರಜೀವನಹಳ್ಳಿ |
| ಸರ್ವಜ್ಞನಗರ | ಕಾಡುಗೊಂಡನಹಳ್ಳಿ, ಲಿಂಗರಾಜಪುರ |

## ಕ್ಷೇತ್ರವಾರು ಮರು ವಿಂಗಡನೆ ವಾರ್ಡ್‌ಗಳ ವಿವರ:

| ಕ್ಷೇತ್ರ | ಹಳೆಯ ವಾರ್ಡ್ | ಹೊಸ ವಾರ್ಡ್ |
|---|---|---|
| ಯಲಹಂಕ | 4 | 4 |
| ಮಹಾಲಕ್ಷ್ಮೀ ಲೇಔಟ್ | 7 | 7 |
| ಸಿ.ವಿ.ರಾಮನ್ ನಗರ | 7 | 7 |
| ವಿಜಯ ನಗರ | 8 | 8 |
| ಬಸವನಗುಡಿ | 6 | 6 |
| ಮಲ್ಲೇಶ್ವರಂ | 7 | 6 |
| ಹೆಬ್ಬಾಳ | 8 | 7 |
| ಪುಲಕೇಶಿನಗರ | 7 | 6 |
| ಶಿವಾಜಿನಗರ | 7 | 5 |
| ಶಾಂತಿನಗರ | 7 | 6 |
| ಗಾಂಧಿನಗರ | 7 | 6 |
| ರಾಜಾಜಿನಗರ | 7 | 5 |
| ಗೋವಿಂದರಾಜ ನಗರ | 9 | 7 |
| ಚಾಮರಾಜಪೇಟೆ | 7 | 6 |
| ಚಿಕ್ಕಪೇಟೆ | 7 | 6 |
| ಪದ್ಮನಾಭನಗರ | 8 | 7 |
| ಬಿ.ಟಿ.ಎಂ.ಲೇಔಟ್ | 8 | 7 |
| ಜಯನಗರ | 7 | 5 |
| ಕೆ.ಆರ್.ಪುರ | 9 | 11 |
| ಬ್ಯಾಟರಾಯನಪುರ | 7 | 9 |
| ಯಶವಂತಪುರ | 5 | 7 |
| ರಾಜರಾಜೇಶ್ವರಿ ನಗರ | 9 | 11 |
| ದಾಸರಹಳ್ಳಿ | 8 | 10 |
| ಸರ್ವಜ್ಞ ನಗರ | 8 | 9 |
| ಮಹದೇವಪುರ | 8 | 10 |
| ಬೊಮ್ಮನಹಳ್ಳಿ | 8 | 10 |
| ಬೆಂಗಳೂರು ದಕ್ಷಿಣ | 7 | 9 |
| ಆನೇಕಲ್ | 1 | 1 |

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**